ಸಾರಿಗೆ ನಿಗಮಕ್ಕೆ ಅರ್ಜಿ ಸಲ್ಲಿಸುವವರ ಸಂಖ್ಯೆ ಕಡಿಮೆ | ದಿನಕ್ಕೆ 2 ರಿಂದ 3 ಸಾವಿರ ರೂ.ಸಂಪಾದನೆ

ಚಾಲಕರಿಗೆ ಟ್ರಾವೆಲ್ಸ್‌ನಲ್ಲೇ ಹೆಚ್ಚು ಆದಾಯ

ಬೆಂಗಳೂರು: ಓಲಾ, ಉಬರ್, ಟ್ಯಾಕ್ಸಿಗಳಂತಹ ಸ್ವಂತ ಉದ್ಯಮದಲ್ಲಿ ಹೆಚ್ಚು ಆದಾಯ ಬರುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಸ್ತೆ ಸಾರಿಗೆ ನಿಗಮ ಆಹ್ವಾನಿಸುವ ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಸಾರಿಗೆ ಇಲಾಖೆಯಲ್ಲಿ ನೂರು ಹುದ್ದೆಗಳು ಖಾಲಿ ಇದ್ದರೆ ಹತ್ತು ಸಾವಿರಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗುತ್ತಿದ್ದವು. ಆದರೆ, ಇತ್ತೀಚೆಗೆ ಆಹ್ವಾನಿಸುವ ನೂರು ಹುದ್ದೆಗಳ ಭರ್ತಿಗೆ ಸಾವಿರ ಅರ್ಜಿಗಳನ್ನು ಸಲ್ಲಿಕೆಯಾಗುತ್ತಿವೆ. ಇದಕ್ಕೆ ಕಾರಣ ಖಾಸಗಿ ಉದ್ಯಮದಲ್ಲಿ ಹೆಚ್ಚು ಹಣ ಸಂಪಾದನೆ ಮಾಡಬಹುದು. ವಾಹನ ಚಾಲನಾ ಪರವಾನಗೆ ಹೊಂದಿರುವ ಬಹುತೇಕರು ಖಾಸಗಿ ವಾಹನಗಳತ್ತ ಮುಖಮಾಡಿದ್ದಾರೆ. ಓಲಾ, ಉಬರ್, ಆಟೋರಿಕ್ಷಾ, ಸ್ವಂತ ಟ್ಯಾಕ್ಸಿಗಳನ್ನು ಹೊಂದಿರುವವರು ದಿನಕ್ಕೆ 2 ರಿಂದ 3 ಸಾವಿರ ರೂ.ಸಂಪಾದನೆ ಮಾಡುತ್ತಿದ್ದಾರೆ. ಇದರಿಂದ ಚಾಲಕರು ಟ್ಯಾಕ್ಸಿಗಳನ್ನು ಇಟ್ಟುಕೊಂಡು ಸ್ವಂತ ಟ್ರಾವೆಲ್ಸ್‌ನೊಂದಿಗೆ ಬದುಕು ಕಟ್ಟಿಕೊಳ್ಳುತ್ತಿದ್ದಾರೆ. ಸಾರಿಗೆ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದರೆ ಮಾಸಿಕ ವೇತನ ಸಾಕಾಗುತ್ತಿಲ್ಲ. ಮಕ್ಕಳ ವಿದ್ಯಾಭ್ಯಾಸ, ಕುಟುಂಬ ನಿರ್ವಹಣೆ ಸೇರಿದಂತೆ ಇತರೆ ಖರ್ಚು ವೆಚ್ಚಗಳಿಗೆ ಸಾಟಿಯಾಗುತ್ತದೆ. ಸ್ವಂತ ಟ್ಯಾಕ್ಸಿ ಅಥವಾ ಓಲಾ, ಉಬರ್ ಟ್ರಾವೆಲ್ಸ್‌ನಲ್ಲಿ ಕೆಲಸ ಮಾಡಿದರೆ ಹೆಚ್ಚು ದುಡಿಯಬಹುದು. ಸಾರಿಗೆ ನಿಗಮದಲ್ಲಿ ಮೇಲಾಧಿಕಾರಿಗಳ ಕಿರುಕುಳ, ಒತ್ತಡ, ಬಿಡುವಿಲ್ಲದೇ ಕೆಲಸ ಮಾಡುವುದು ಕಷ್ಟಕರವಾಗುತ್ತಿದೆ ಎಂದು ಚಾಲಕರೊಬ್ಬರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸ್ವಯಂಕೃತ ದುಬಾರಿ ದರ

ಓಲಾ, ಉಬರ್‌ಗಳು ಒಂದೇರಡು ಕಿಲೋಮಿಟರ್ ಪ್ರಯಾಣಕ್ಕೆ 150 ರಿಂದ 200 ರೂ. ದರ ನಿಗದಿ ಮಾಡಿದ್ದಾರೆ. ಕೆಲವರು ಕಿ.ಮೀ.ಲೆಕ್ಕದಲ್ಲಿ ಹಣ ಪಡೆಯುತ್ತಿದ್ದಾರೆ. ಟ್ಯಾಕ್ಸಿ, ಆಟೋರಿಕ್ಷಾಗಳು ಕ್ಷಣಮಾತ್ರದಲ್ಲಿ ಪ್ರಯಾಣಿಕರ ಮುಂದೆ ಬಂದು ನಿಲ್ಲುತ್ತಿವೆ. ಹೇಳಿದ ಸ್ಥಳಕ್ಕೆ ಕರೆದುಕೊಂಡು ಹೋಗುತ್ತಿವೆ. ಇದರಿಂದ ಖಾಸಗಿ ವಾಹನದಲ್ಲಿ ಪ್ರಯಾಣ ಮಾಡುವವರ ಸಂಖ್ಯೆಯೂ ಹೆಚ್ಚಾಗಿದೆ. ಬಾಡಿಗೆ ಚಾಲಕರು ಸ್ವಯಂಕೃತ ದರ ನಿಗದಿ ಮಾಡಿಕೊಂಡಿದ್ದಾರೆ. ಇದರಿಂದ ದಿನಕ್ಕೆ ಹೆಚ್ಚು ಸಂಪಾದನೆ ಮಾಡಿಕೊಳ್ಳುತ್ತಿದ್ದಾರೆ. ಸಾರಿಗೆ ಸಂಸ್ಥೆ, ನಿಗಮಗಳು ನೀಡುವ ತಿಂಗಳ ವೇತನ ಸಾಕಾಗುತ್ತಿಲ್ಲ ಚಾಲಕರು ಸ್ವಂತ ವಾಹನ ಇಟ್ಟುಕೊಂಡಿದ್ದಾರೆ.

ಬಾಡಿಗೆ ವಾಹನ ಬಳಕೆ

ಬಹುತೇಕ ಪ್ರಯಾಣಕ್ಕೆ ಬಾಡಿಗೆ ವಾಹನ, ಟ್ಯಾಕ್ಸಿ, ಟ್ರಾವೆಲ್ಸ್ ಬಳಕೆ ಮಾಡುತ್ತಿದ್ದಾರೆ. ಪ್ರವಾಸಿ ತಾಣಗಳಿಗೆ ಭೇಟಿ ನೀಡುವವರು ಬಾಡಿಗೆ ಟ್ರಾವೆಲ್ಸ್‌ಗಳಲ್ಲಿ ಹೋಗುತ್ತಿದ್ದಾರೆ. ಮದುವೆ, ಸಭೆ, ಸಮಾರಂಭಗಳಿಗೆ ಕುಟುಂಬ ಸಮೇತ ತೆರಳುವವರು ಬಾಡಿಗೆ ವಾಹನಗಳತ್ತ ಮುಖಮಾಡುತ್ತಿದ್ದಾರೆ. ರಾಜ್ಯ ಸಾರಿಗೆಯಲ್ಲಿ ಪ್ರಯಾಣ ಬೆಳೆಸುವವರ ಸಂಖ್ಯೆ ಭಾರಿ ಪ್ರಮಾಣದಲ್ಲಿ ಕಡಿಮೆಯಾಗುತ್ತಿದೆ. ಬೆಂಗಳೂರು, ಮೈಸೂರು, ಮಂಗಳೂರು ದೊಡ್ಡ ದೊಡ್ಡ ನಗರ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಟ್ಯಾಕ್ಸಿಗಳು ಓಡಾಡುತ್ತಿವೆ.

ಸೆಕೆಂಡ್ ಹ್ಯಾಂಡ್ ಕಾರು ಖರೀದಿ

ಸ್ವಂತ ಉದ್ಯೋಗದಲ್ಲಿ ತೊಡಗಿರುವ ಚಾಲಕರು ಸೆಕೆಂಡ್ ಹ್ಯಾಂಡ್ ಕಾರುಗಳನ್ನು ಖರೀದಿ ಮಾಡಲು ಮುಂದಾಗುತ್ತಿದ್ದಾರೆ. ಒಂದು ಕಾರು ಇಟ್ಟುಕೊಂಡಿರುವವರು ಈಗ ನಾಲ್ಕೈದು ಕಾರುಗಳನ್ನು ಹೊಂದಿದ್ದಾರೆ. ಖಾಸಗಿ ಹೋಟೆಲ್, ಗೆಸ್ಟ್‌ಹೌಸ್, ವಿವಿಧ ಕಂಪನಿಗಳಲ್ಲಿ ತಿಂಗಳ ಬಾಡಿಗೆ ಲೆಕ್ಕದಲ್ಲಿ ಚಾಲಕರು ಟ್ಯಾಕ್ಸಿಗಳನ್ನು ಓಡಿಸುತ್ತಿದ್ದಾರೆ. ಓಲಾ, ಉಬರ್‌ಗಳಲ್ಲಿ ದಿನಕ್ಕೆ ಟ್ರಿಪ್ ಲೆಕ್ಕದಲ್ಲಿ 1000 ದಿಂದ 1500 ರೂ.ವರೆಗೆ ಸಂಪದಾನೆ ಮಾಡುತ್ತಿದ್ದಾರೆ.

> ಕೆಎಸ್‌ಆರ್‌ಟಿಸಿ ಸಂಸ್ಥೆಯಲ್ಲಿ 6 ವರ್ಷ ಚಾಲಕನಾಗಿ ಸೇವೆ ಸಲ್ಲಿಸಿದ್ದೇನೆ. ಆದರೆ, ಸ್ವಯಂ ನಿವೃತ್ತಿ ಪಡೆದುಕೊಂಡು ಸ್ವಂತ ಕಾರು ಇಟ್ಟುಕೊಂಡು ಬಾಡಿಗೆ ಓಡಿಸುತ್ತಿದ್ದೇನೆ. ನಾಲ್ಕು ವರ್ಷದಲ್ಲಿ ನನ್ನ ಬಳಿ ಈಗ 3 ಕಾರುಗಳಿವೆ. ಅವುಗಳನ್ನು ಬಾಡಿಗೆಗೆ ಓಡಿಸುತ್ತೇನೆ. ತಿಂಗಳಿಗೆ ಲಕ್ಷಾಂತರ ರೂ. ಸಂಪಾದಿಸುತ್ತಿದ್ದೇನೆ. ನನ್ನ ಜೊತೆ ಇಬ್ಬರು ಚಾಲಕರು ದಿನದ ಕೂಲಿ ಲೆಕ್ಕದಲ್ಲಿ ದುಡಿಯುತ್ತಿದ್ದಾರೆ.
>
> ▪ ಮಲ್ಲಿಕಾರ್ಜುನ್.ಜಿ.ಬಿ
> | ಖಾಸಗಿ ಟ್ಯಾಕ್ಸಿ ಚಾಲಕ

ಗ್ಯಾರಂಟಿ ಯೋಜನೆ ಲಾಭ

ರಾಜ್ಯ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಯ ಮಹಿಳೆಯರಿಗೆ ಉಚಿತ ಬಸ್ ಸೌಲಭ್ಯದ ಲಾಭ ಟ್ಯಾಕ್ಸಿ, ಆಟೋ, ಕ್ಯಾಬ್‌ಗಳಿಗೆ ಆಗುತ್ತಿದೆ. ಬಸ್‌ಗಳಲ್ಲಿ ಹೆಚ್ಚಾಗಿ ಮಹಿಳೆಯರು ಪ್ರಯಾಣ ಮಾಡುತ್ತಿರುವ ಪರಿಣಾಮ ಪುರುಷ ಪ್ರಯಾಣಿಕರು ಅನಿವಾರ್ಯ ಎಂಬಂತೆ ಖಾಸಗಿ ವಾಹನಗಳಲ್ಲಿ ಪ್ರಯಾಣ ಬೆಳೆಸುತ್ತಿದ್ದಾರೆ. ದೂರದ ಊರಿಗೆ ಹೋಗಲು ಬಾಡಿಗೆ ವಾಹನಗಳನ್ನು ಬುಕ್ ಮಾಡುತ್ತಿದ್ದಾರೆ. ನಗರದ ಪ್ರದೇಶಗಳಲ್ಲಿ ಓಡಾಡಲು ಓಲಾ, ಉಬರ್‌ಗಳಲ್ಲಿ ಓಡಾಡುತ್ತಿದ್ದಾರೆ. ವಿಮಾನ ನಿಲ್ದಾಣ, ಬಸ್‌ನಿಲ್ದಾಣ, ರೈಲ್ವೆ ಸ್ಟೇಷನ್‌ಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಖಾಸಗಿ ವಾಹನಗಳು ಕಾಣಿಸುತ್ತಿವೆ.

ಬೇಳೂರು ಗೋಪಾಲಕೃಷ್ಣ ಅಧಿಕಾರ ಸ್ವೀಕಾರ

ಬೆಂಗಳೂರು: ಅರಣ್ಯ ಕೈಗಾರಿಕಾ ನಿಗಮದ ನೂತನ ಅಧ್ಯಕ್ಷರಾಗಿ ಸಾಗರ ಶಾಸಕ ಬೇಳೂರು ಗೋಪಾಲಕೃಷ್ಣ ಶುಕ್ರವಾರ ಅಧಿಕಾರ ಸ್ವೀಕರಿಸಿದರು. ಈ ವೇಳೆ ಮಾತನಾಡಿದ ಅವರು, ಅರಣ್ಯ ಕೈಗಾರಿಕಾ ನಿಗಮದವತಿಯಿಂದ ಇನ್ನು ಮುಂದೆ ನೂತನವಾಗಿ ಲಿಡ್ಕರ್ ಮಾದರಿಯಲ್ಲಿ ಆಸನ, ಪೀಠಪೋಕರಣಗಳ ಮಳಿಗೆಗಳನ್ನು ಆರಂಭಿಸಲಾಗುವುದು ಇದರಿಂದ ನಿಗಮಕ್ಕೆ ಹಾಗೂ ಸರ್ಕಾರಕ್ಕೆ ಹೆಚ್ಚಿನ ಲಾಭ ಮಾಡಿಕೊಡುವ

ಉದ್ದೇಶ ಇದೆ. ಸರ್ಕಾರಿ ಶಾಲೆ ಹಾಗೂ ಸರ್ಕಾರಿ ಕಚೇರಿಗಳಿಗೆ ಅರಣ್ಯ ಕೈಗಾರಿಕಾ ನಿಗಮದಿಂದಲೇ ತಯಾರಿಸಿದ ಕುರ್ಚಿ, ಟೇಬಲ್, ಬೆಂಚುಗಳನ್ನು ಇನ್ನು ಮುಂದೆ ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದು. ಈ ಕುರಿತಂತೆ ಶಿಕ್ಷಣ ಇಲಾಖೆ, ವಿವಿಧ ಇಲಾಖೆಗಳ ಮುಖ್ಯಸ್ಥರಿಂದ ಅರಣ್ಯ ಕೈಗಾರಿಕಾ ನಿಗಮದಿಂದಲೇ ಖರೀದಿ ಮಾಡಲು ಸುತ್ತೋಲೆ ಹೊರಡಿಸುವಂತೆ ಸೂಚಿಸಲಾಗುವುದು ಎಂದರು. ನಿಗಮದ ಕಾರ್ಯನಿರ್ವಾಹಕ ಅಧಿಕಾರಿ ಪ್ರಶಾಂತ್ ಶಂಕಿನಮಠ, ಮಾಜಿ ಶಾಸಕ ಆಯನೂರು ಮಂಜುನಾಥ್, ಸೂಡಾ ಮಾಜಿ ಅಧ್ಯಕ್ಷ ರಮೇಶ್, ಜಿಲ್ಲಾ ಈಡಿಗರ ಸಂಘದ ಅಧ್ಯಕ್ಷ ಶ್ರೀಧರ್, ಈಡಿಗ ಸಂಘದ ರಾಜ್ಯಾಧ್ಯಕ್ಷ ತಿಮ್ಮೇಗೌಡ, ಶಿವಮೊಗ್ಗ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಮಂಜುನಾಥ್ ಗೌಡ, ಶ್ರೀಕಾಂತ್ ಹಾಗೂ ಇತರರು ಇದ್ದರು.

ಮಾಂಗಲ್ಯ ಅಪಹರಣ

ಚಿಕ್ಕನಾಯಕನಹಳ್ಳಿ: ಮಹಿಳೆಯ ಕತ್ತು ಹಿಸುಕಿ ಪ್ರಜ್ಞೆ ತಪ್ಪಿಸಿ ಮಾಂಗಲ್ಯ ಸರ ಅಪಹರಿಸಿದ ಘಟನೆ ಚಿಕ್ಕನಾಯಕನಹಳ್ಳಿ ಸಮೀಪದ ಮಾಳಿಗೆಹಳ್ಳಿಯ ತೋಟದಲ್ಲಿ ಸೋಮವಾರ ಮಧ್ಯಾಹ್ನ 1.30ರಲ್ಲಿ ನಡೆದಿದೆ. ಮಾಳಿಗೆಹಳ್ಳಿ ಗ್ರಾಮದ ಸಂತೋಷ್ ಎಂಬುವರ ಪತ್ನಿ ಲತಾ ತನ್ನ ತೋಟದಲ್ಲಿ ಕೆಲಸ ಮಾಡುತ್ತಿರುವಾಗ ಅಪರಿಚಿತ ವ್ಯಕ್ತಿ ಹಿಂದಿನಿಂದ ಬಂದು ಮಹಿಳೆಯ ಕತ್ತು ಹಿಸುಕಿ ಪ್ರಜ್ಞೆ ತಪ್ಪಿಸಿ ಸರ ಅಪಹರಿಸಿದ್ದಾನೆ.

ಹಲ್ಲು ಸರಿ ಮಾಡದ್ದಕ್ಕೆ 2 ಲಕ್ಷ ಪರಿಹಾರ

ಬೆಂಗಳೂರು : ಬೆಂಗಳೂರಿನ ಗ್ರಾಹಕ ನ್ಯಾಯಾಲಯವು ಇತ್ತೀಚೆಗೆ ಇಬ್ಬರು ದಂತವೈದ್ಯರಿಗೆ ಹಲ್ಲಿನ ಪ್ರಕ್ರಿಯೆಗೆ ಸಂಬಂಧಿಸಿದಂತೆ ವ್ಯಕ್ತಿಯೊಬ್ಬನಿಗೆ 2 ಲಕ್ಷ ರೂಪಾಯಿ ಪರಿಹಾರವನ್ನು ನೀಡುವಂತೆ ಆದೇಶಿಸಿದೆ.

ಸಬ್ಕಾ ಡೆಂಟಿಸ್ಟ್ ಕ್ಲಿನಿಕ್‌ನ ಇಬ್ಬರು ದಂತ ವೈದ್ಯರು ನಡೆಸಿದ ಹಲ್ಲಿನ ಚಿಕಿತ್ಸೆಯು ಸರಿಯಾಗಿಲ್ಲದ ಕಾರಣ ತನ್ನ 10 ಹಲ್ಲುಗಳು ಹಾನಿಗೊಳಗಾಗಿವೆ ಎಂದು ವ್ಯಕ್ತಿಯೊಬ್ಬರು ಬೆಂಗಳೂರು 1 ನೇ ಹೆಚ್ಚುವರಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ದೂರು ದಾಖಲಿಸಿದ್ದರು.

ದೂರುದಾರರು 2016 ರಲ್ಲಿ ಸಬ್ಕಾ ಡೆಂಟಿಸ್ಟ್ ಕ್ಲಿನಿಕ್‌ಗೆ ಭೇಟಿ ನೀಡಿದ್ದರು ಮತ್ತು ಅವರ ಮುಂಭಾಗದ ಹಲ್ಲುಗಳನ್ನು ಸರಿಪಡಿಸಲು ಸೆರಾಮಿಕ್ ಬ್ರೇಸ್‌ಗಳೊಂದಿಗೆ ಆರ್ಥೋಡಾಂಟಿಕ್ ಚಿಕಿತ್ಸೆಗಾಗಿ 34,000 ರೂ. ಪಾವತಿಸಿದ್ದರು. ದಂತವೈದ್ಯರು ವರ್ಷವಿಡೀ ಎರಡು ವರ್ಷಕ್ಕೂ ಹೆಚ್ಚು ಕಾಲ ಕಾರ್ಯವಿಧಾನವನ್ನು ಎಳೆದಿದ್ದರಿಂದ 50,000 ರೂ. ವರೆಗೆ ಹೆಚ್ಚುವರಿ ಶುಲ್ಕವನ್ನು ಪಾವತಿಸಲಾಯಿತು ಎಂದು ಅವರು ಆರೋಪಿಸಿದ್ದರು.

2019 ರಲ್ಲಿ ಎಲ್ಲ ಪ್ರಕ್ರಿಯೆ ಮುಕ್ತಾಯಗೊಂಡಾಗ, ರೋಗಿಯು ತನ್ನ ಎಂಟು ಹಲ್ಲುಗಳು ಮತ್ತು ಇನ್ನೆರಡು ದಂತಕವಚಗಳಿಗೆ ಹಾನಿಯಾಗಿದೆ ಎಂದು ಕಂಡುಕೊಂಡರು. ಅವರು ಕ್ಲಿನಿಕ್‌ಗೆ ಮತ್ತೆ ಹೋದರು. ದಂತವೈದ್ಯರ ಹೊಸ ತಂಡವನ್ನು ನಿಯೋಜಿಸಲಾಯಿತು. ಆದರೆ, ಹೊಸ ತಂಡ ನಡೆಸಿದ ಕಾರ್ಯವಿಧಾನವು ಮತ್ತಷ್ಟು ಹಾನಿ ಮತ್ತು ನೋವನ್ನು ಉಂಟುಮಾಡಿದೆ ಎಂದು ಅವರು ಹೇಳಿದ್ದಾರೆ.

ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು ಆಸ್ಪತ್ರೆಯ ದಂತ ವಿಭಾಗದ ವ್ಯಕ್ತಿಗೆ ಯಾವುದೇ ಪರಿಹಾರ ಸಿಗುತ್ತಿಲ್ಲ. ತಪಾಸಣೆಯ ನಂತರವೂ ಇನ್ನು ಹೆಚ್ಚಿನ ಚಿಕಿತ್ಸೆ ಕೈಗೊಳ್ಳಬೇಕು ಎಂದು ಹೇಳಿದರು.

ಇದರಿಂದ ಬೇಸರಗೊಂಡ ರೋಗಿ ಪೊಲೀಸರಿಗೆ ದೂರು ನೀಡಿದರು.

ಈ ವಿಷಯವಾಗಿ ಪೊಲೀಸರು ಯಾವುದೇ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ದೂರುದಾರರು ಗ್ರಾಹಕ ನ್ಯಾಯಾಲಯದ ಮೊರೆ ಹೋದರು.

ಈ ಕುರಿತು ವರದಿ ಸಲ್ಲಿಸುವಂತೆ ಕರ್ನಾಟಕ ರಾಜ್ಯ ದಂತ ವೈದ್ಯಕೀಯ ಮಂಡಳಿಗೆ ನ್ಯಾಯಾಲಯ ಸೂಚಿಸಿದ ನಂತರ ಸಂಶೋಧನೆಗಳ ಆಧಾರದ ಮೇಲೆ, ಗ್ರಾಹಕ ನ್ಯಾಯಾಲಯವು ಅವರ ಪರವಾಗಿ ತೀರ್ಪು ನೀಡಿತು. ಇಬ್ಬರು ಸಬ್ ಕ್ಲಿನಿಕ್ ದಂತ ವೈದ್ಯರಿಗೆ ಉಂಟಾದ ಹಾನಿಗೆ ಪರಿಹಾರವಾಗಿ 2 ಲಕ್ಷ ರೂ. ರೋಗಿಯು ಶುಲ್ಕವಾಗಿ ಪಾವತಿಸಿದ 50,000 ರೂಪಾಯಿಯನ್ನು ಹಿಂತಿರುಗಿಸಬೇಕು ಎಂದು ನ್ಯಾಯಾಲಯವು ಕ್ಲಿನಿಕ್ ಮಾಲೀಕರಿಗೆ ನಿರ್ದೇಶನ ನೀಡಿದೆ.

ವಾಮಾಚಾರ: ಆರೋಪಿಗಳ ವಿರುದ್ಧ ಸೂಕ್ತ ಕ್ರಮಕ್ಕೆ ಒತ್ತಾಯ

ಸಂಕ ಸಮಾಚಾರ, ಕುದೂರು

ಸರ್ಕಾರಿ ಶಾಲೆಯೊಂದರ ಬಳಿ ವಾಮಾಚಾರ ಮಾಡಿರುವುದು ಈಗ ಸುತ್ತಮುತ್ತಲ ಹಳ್ಳಿಗಳ ಜನರ ನೆಮ್ಮದಿ ಕೆಡಿಸಿದ್ದು. ಶಾಲೆಯ ಶಿಕ್ಷಕರೂ ಕೂಡ ಆತಂಕಗೊಂಡಿರುವ ಪ್ರಕರಣ ಕುದೂರಿನಲ್ಲಿ ನಡೆದಿದೆ.

ಕುದೂರು ಗ್ರಾಮದ ಸರ್ಕಾರಿ ಕೋಟೆ ಶಾಲೆಯ ಬಳಿ ಶುಕ್ರವಾರ ಶಾಲೆಗೆ ಆಗಮಿಸಿದ ಶಿಕ್ಷಕರಿಗೆ ಕುಂಕುಮದ ಅನ್ನ ಮಾಡಿ ನಿಂಬೆ ಹಣ್ಣು ಕುಯ್ದು, ಮೊಟ್ಟೆ ಒಡೆದು ವಾಮಾಚಾರ ಮಾಡಿರುವುದು ಕಂಡು ಬೆಚ್ಚಿಬಿದ್ದ ಶಿಕ್ಷಕರು, ಶಾಲೆಯ ಎಸ್.ಡಿ.ಎಂ.ಸಿ ಯವರಿಗೆ ಕರೆ ಮಾಡಿ ತಿಳಿಸಿದ್ದಾರೆ.

ತಕ್ಷಣ ಎಸ್‌ಡಿಎಂಸಿ ಅಧ್ಯಕ್ಷ ಜಗದೀಶ್ ಹಾಗೂ ತಾ.ಪಂ. ಮಾಜಿ ಅಧ್ಯಕ್ಷ ಕೆ.ಆರ್. ಯತಿರಾಜು ಸ್ಥಳಕ್ಕೆ ಭೇಟಿ ನೀಡಿ ವೀಕ್ಷಿಸಿದ್ದಾರೆ. ನಿನ್ನೆ ಸಂಜೆ ಇಬ್ಬರು ಯುವಕರು ಶಾಲೆಯಯ ಬಳಿ ವಾಮಾಚಾರ ಮಾಡಿರುವುದನ್ನು ಚಿಕ್ಕ ಹುಡುಗರು ಕಂಡಿದ್ದಾರೆ. ಇಬ್ಬರು ಯುವಕರು ಇವರಿಗೆ ಹೆದರಿಸಿ ಇದನ್ನು ಯಾರಿಗಾದರೂ ಹೇಳಿದರೆ ಕುತ್ತಿಗೆ ಹಿಸುಕುವುದಾಗಿ ಧಮಕಿ

ಕುದೂರಿನ ಸರ್ಕಾರಿ ಕೋಟೆ ಶಾಲೆಯ ಬಳಿ ವಾಮಾಚಾರ ಮಾಡಿರುವುದು.

ಹಾಕಿದರೆಂದು ಮಕ್ಕಳು ತಿಳಿಸಿದರು.

ಈ ಕುರಿತು ಕುದೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ತಕ್ಷಣ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನೆಡೆಸಿದ್ದಾರೆ. ಈ ಕೃತ್ಯವೆಸಗಿರುವ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಶಾಲೆಯ ಶಿಕ್ಷಕರು, ಎಸ್‌ಡಿಎಂಸಿಯವರು ಮನವಿ ಮಾಡಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ತಲೆಎತ್ತಲಿವೆ 20 ಉದ್ಯಾನಗಳು

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 2024–25ರ ಅವಧಿಯಲ್ಲಿ ನಗರದಲ್ಲಿ 20 ಹೊಸ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಖಚಿತಪಡಿಸಿದ್ದಾರೆ. ವಿಶೇಷವಾಗಿ ಬಿಬಿಎಂಪಿಯ 110 ಹಳ್ಳಿಗಳ ವ್ಯಾಪ್ತಿಯಲ್ಲಿ ಉದ್ಯಾನವನಗಳು ತಲೆ ಎತ್ತಲಿದ್ದು, ಮಹದೇವಪುರ, ಯಲಹಂಕ, ದಾಸರಹಳ್ಳಿ, ಬೊಮ್ಮನಹಳ್ಳಿ ಮತ್ತು ಆರ್.ಆರ್.ನಗರ ವಲಯಗಳಲ್ಲಿ ನಿರ್ಮಾಣ ಮಾಡುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ.

ಬಿಬಿಎಂಪಿ ಅಧಿಕಾರಿಗಳ ಪ್ರಕಾರ, ಬೇಲಿ ಹಾಕಿದ ಮತ್ತು ಬಳಕೆಯಾಗದೆ ಬಿದ್ದಿರುವ ಪಾಲಿಕೆ ಆಸ್ತಿಗಳಲ್ಲಿ ಉದ್ಯಾನವನಗಳನ್ನು ನಿರ್ಮಾಣ ಮಾಡಲಾಗುತ್ತದೆ. ಬೆಂಗಳೂರು ನಗರವನ್ನು ಹಸಿರಾಗಿಡಲು ಹಾಗೂ ಪರೋಕ್ಷವಾಗಿ ನಗರದಲ್ಲಿ ಮಾಲಿನ್ಯವನ್ನು ನಿಯಂತ್ರಿಸುವ ಇರಾದೆ ಬಿಬಿಎಂಪಿಯ ಪ್ರಯತ್ನವಾಗಿದೆ. ಪ್ರಾಜೆಕ್ಟ್ ವಿಭಾಗವು ಫೆನ್ಸಿಂಗ್, ಮಾರ್ಗಗಳು ಮತ್ತು ಇತರ ಸಿವಿಲ್ ಕಾಮಗಾರಿಗಳನ್ನು ನೋಡಿಕೊಳ್ಳುತ್ತದೆ.

ಆದರೆ ತೋಟಗಾರಿಕೆ ವಿಭಾಗವು ಮಾವು, ಬೇವು, ನಿಂಬೆ, ಮರಸೇಬು ಹಾಗೂ ಇತರೆ ಸಸ್ಯಗಳನ್ನು ನೆಡುವ ಜವಾಬ್ದಾರಿಯನ್ನು ಹೊತ್ತುಕೊಂಡಿದೆ.

ಪೌರಾಯುಕ್ತರ ಒಡೆತನದ ಹಲವು ಆಸ್ತಿಗಳು ಖಾಲಿ ಬಿದ್ದಿದ್ದು, ಅತಿಕ್ರಮಣ ತಡೆಯಲು ಬೇಲಿ ಹಾಕಲಾಗಿದೆ. ನಾವು ಬಿಬಿಎಂಪಿ ಕೇಂದ್ರ ಕಚೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ. ಈಗಾಗಲೇ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸುತ್ತಿದ್ದೇವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರಸ್ತುತ 1,146 ಪಾರ್ಕ್‌ಗಳಿವೆ. ಅಲಂಕಾರಿಕಾ ಸಸ್ಯಗಳು ಜನರನ್ನು ಆಕರ್ಷಿಸುತ್ತವೆ. ಆದರೆ ಅವು ಉಪಯುಕ್ತವಲ್ಲ, ಆದ್ದರಿಂದ ಹಣ್ಣು ಹಾಗೂ ಔಷಧಿಯಂತಹ ಮರಗಳನ್ನು ಬೆಳೆಯಲು ನಿರ್ಧರಿಸಿದ್ದೇವೆ. ಸಾರ್ವಜನಿಕರು ಹಣ್ಣುಗಳನ್ನು ಕಿತ್ತುಕೊಳ್ಳುವ ಅವಕಾಶವಿದೆ. ಜೊತೆಗೆ ಹಬ್ಬ ಹರಿದಿನಗಳಲ್ಲಿ ಬೇವು ಮತ್ತು ಮಾವಿನ ಎಲೆಗಳನ್ನು ತೆಗೆದುಕೊಳ್ಳಲು ಪ್ರಯೋಜನವಾಗಲಿದ್ದು, ಹಾಗಾಗಿ ಇಂತಹ ಸಸಿಗಳನ್ನು ನೆಡಲಾಗುತ್ತದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

'ಹಸಿರು ಬೆಂಗಳೂರು' ಎಂಬ ಶೀರ್ಷಿಕೆಯಡಿ ಪಾಲಿಕೆಯು ನಗರದಾದ್ಯಂತ ಒಂದು ಲಕ್ಷಕ್ಕೂ ಹೆಚ್ಚು ಸಸಿಗಳನ್ನು ನೆಡುವ ಯೋಜನೆ ಕೂಡ ಇದೆ. ಅವುಗಳಲ್ಲಿ ಹೆಚ್ಚಿನವು ಹಣ್ಣು ಹಾಗೂ ಔಷಧಿಯಂತಹ ಸಸಿಗಳಾಗಿವೆ.

ಹತ್ತನೇ ತರಗತಿ ಮಕ್ಕಳಿಗೆ ಪರೀಕ್ಷಾ ಸಿದ್ಧತೆ ಕುರಿತು ಆತ್ಮಶಕ್ತಿ ಜಾಗೃತಿ ಕಾರ್ಯಕ್ರಮ

ಶ್ರದ್ಧೆಯ ನಡ